ಯೋಚಿಸಿದೆನು. ಮರದ ಚೂರು, ತರಗೆಲೆಗಳನ್ನು ಕಲೆಹಾಕಿ ಬೆಂಕಿ ಹೊತ್ತಿಸಿದೆನು. ಎದ್ದುನಿಂತು, ಬೆಂಕಿಯಲ್ಲಿ ಹಾರಲು ಅನುವು ಮಾಡಿಕೊಂಡೆನು. ಇನ್ನೇನು ಹಾರಬೇಕು, ಹಾರಿಯೇ ಬಿಟ್ಟೆ!

''ನೋಡುತ್ತೇನೆ, ನಾನು ನನ್ನ ಸಿಂಹಾಸನದಿಂದ ಧುಮುಕಿದ್ದೇನೆ! ಸುತ್ತಲಿನವರೆಲ್ಲ 'ಜಯ, ಜಯ' ಎಂದು ನನಗೆ ಜಯಕಾರ ಮಾಡುತ್ತಿದ್ದಾರೆ! ಭೇರಿ, ಕೊಂಬುಗಳ ನಿನಾದ ಕೇಳಿಬರುತ್ತಿದೆ! ಆಗ ನನಗೆ ಗೊತ್ತಾಯಿತು, 'ನಾನು ರಾಜ ಲವಣ; ಚಾಂಡಾಲನಲ್ಲ' ಎಂದು. ನನಗೆ ಈಗ ಅರಿವಾಗಿದೆ, ಇದೆಲ್ಲಾ ಆ ಮಾಂತ್ರಿಕ ಸಿದ್ಧನ ಕೈಚಳಕ ಎಂದು. ಇಷ್ಟು ಕಾಲ ನನ್ನನ್ನು ಇಲ್ಲಸಲ್ಲದ ಕಷ್ಟ–ತಾಪ ತ್ರಯಗಳಿಗೆ ಸಿಲುಕಿಸಿದವನು ಅವನೇ ಎಂದು ಈಗ ನನಗೆ ಗೊತ್ತಾಗಿದೆ.''

ರಾಜನ ಮಾತುಗಳನ್ನು ಕೇಳುತ್ತಿದ್ದ ಮಂತ್ರಿಗಳು, ಸಭಿಕರು ಎಲ್ಲರೂ ಆ ಮಾಂತ್ರಿಕ ಸಿದ್ಧನೆಲ್ಲಿ ಎಂದು ಆ ಕಡೆ ಈ ಕಡೆ ನೋಡಿದರು. ಅವನಲ್ಲಿ ಯಾಕಾದರೂ ಇದ್ದಾನು? ತನ್ನ ಮಾಯೆ ಮುಗಿದ ಮೇಲೆ ಆ ಮಾಂತ್ರಿಕ ಮಂಗಮಾಯವಾಗಿದ್ದ!

ವಸಿಷ್ಠರು ಈ ಕಥೆಯ ಮರ್ಮವನ್ನು ರಾಮಚಂದ್ರನಿಗೆ ಹೀಗೆ ವಿವರಿಸಿದರು: ''ಅಪ್ಪಾ ರಾಮಚಂದ್ರ, ಆ ಮಾಂತ್ರಿಕ ಸಿದ್ಧ ಯಾರೆಂದುಕೊಂಡೆ? ಅವನೇ ದಿವ್ಯಮಾಯೆ. ಈ ಕಥೆ ಏನನ್ನು ತಿಳಿಸುತ್ತದೆ ಗೊತ್ತೆ? 'ಈ ವಿಶ್ವವೆಲ್ಲವೂ ಮನಸ್ಸೇ ಆಗಿದೆ' ಎಂದು. ಪರಬ್ರಹ್ಮನೇ ಮನಸ್ಸು ಮತ್ತು ಜಗತ್ತಿನ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾನೆ.

''ರಾಮ, ನೀನು ನೋಡುವುದೆಲ್ಲವೂ ಚೈತನ್ಯದ ಅಭಿವ್ಯಕ್ತಿಯೇ ಆಗಿದೆ. ಕಾಲವೆಂಬುದು ಮನಸ್ಸಿನ ಒಂದು ಬಗೆ, ಅಷ್ಟೆ. ಕನಸಿನಲ್ಲಿ ನೀನು ಒಂದು ನೂರು ವರ್ಷಗಳ ಕಾಲದಲ್ಲಿ ಆಗುವುದನ್ನು ಕೇವಲ ಐದು ನಿಮಿಷಗಳಲ್ಲಿ ಅನುಭವಿಸಿಬಿಡುತ್ತೀಯೆ, ಅಲ್ಲವೆ! ಮನಸ್ಸು ಸಮಾಹಿತವಾಗಿದ್ದರೆ, ಅಂದರೆ ಏಕಾಗ್ರಗೊಂಡಿದ್ದರೆ, ಒಂದು ಗಂಟೆಯಷ್ಟು ಕಾಲ ಐದು ನಿಮಿಷದ ಹಾಗೆ ಕಳೆದುಹೋಗುತ್ತದೆ. ಮನಸ್ಸು ಏಕಾಗ್ರವಾಗದಿದ್ದರೆ, ಹತ್ತು ನಿಮಿಷವೂ ಮೂರು ಗಂಟೆಗಳಂತೆ ದೀರ್ಘವಾಗಿ ಕಾಣುತ್ತದೆ. ಈ ರೀತಿಯ ಅನುಭವವನ್ನು ಜಗತ್ತಿನಲ್ಲಿ ಎಲ್ಲರೂ ಕಂಡೇ ಇರುತ್ತಾರೆ. ಅದೇ ರೀತಿ ರಾಜ ಲವಣನು ಕೂಡ ಅರುವತ್ತು ವರ್ಷಗಳ ದೀರ್ಘಕಾಲದ ಜೀವಿತವನ್ನು ಎರಡೇ ಗಂಟೆಗಳಲ್ಲಿ ಅನುಭವಿಸಿಬಿಟ್ಟನು!

''ರಾಮಚಂದ್ರ, ರಾಜ ಲವಣನೆಂಬುವವನು ಯಾರೆಂದುಕೊಂಡೆ? ಅವನು ಎಲ್ಲ ಜೀವರಾಶಿಗಳನ್ನೂ ಪ್ರತಿನಿಧಿಸುತ್ತಾನೆ. ಅವನ ಹಾಗೆಯೇ ಭವದ ಬವಣೆಯನ್ನು ಅಜ್ಞಾನಿ ಜೀವರು ಅನುಭವಿಸುತ್ತಿದ್ದಾರೆ. ಅವರೆಲ್ಲರೂ ಆಸೆಗಳಿಗೆ ದಾಸರು; ಅಹಂಕಾರ, ಮಮಕಾರಗಳಿಗೆ ಮಾರುಹೋದವರು.

''ರಾಮ, ಈ ಜಗತ್ತೆಂಬುದು ಭಗವಂತನ ಅನಂತ ಶಕ್ತಿಯ ಲೀಲಾಸ್ಥಾನ. ಇಲ್ಲಿನ ಜೀವಿಗಳೆಲ್ಲರೂ ಅದರಿಂದ ಮೋಹಿತರಾದವರು. ಹಾಗೆಂದೇ ಅವರು ಅಸತ್ಯವಾದ ಈ ಜಗತ್ತನ್ನು ಸತ್ಯವೆಂದು ತಿಳಿಯುತ್ತಾರೆ. ಸತ್ಯವಾದದ್ದನ್ನು ಅಸತ್ಯವೆಂದು ತಿಳಿಯುತ್ತಾರೆ. ಮರವೊಂದು ಕೊಂಬೆ–ರೆಂಬೆಗಳಿಂದ ಕೂಡಿಕೊಂಡು ಬೆಳೆಯುತ್ತಾ ಹೋಗುತ್ತದಲ್ಲವೆ? ಹಾಗೆಯೇ ಮನಸ್ಸು ಕೂಡ ವಿಕಾಸವಾಗುತ್ತ, ವಿವಿಧ ರೀತಿಯ ಕಲ್ಪನೆಗಳನ್ನು ಮಾಡಿಕೊಳ್ಳುತ್ತ ಹೋಗುತ್ತದೆ.

''ರಾಮ, ಮನಸ್ಸಿನ ಸಂಕಲ್ಪಗಳು ಕಲ್ಪನೆಗಳಲ್ಲದೆ ಬೇರೆಯಲ್ಲ. ಆದ್ದರಿಂದ ಅವುಗಳನ್ನು ಬೇರು ಸಹಿತ ನಾಶಪಡಿಸು. ಹೀಗೆ ಮನಸ್ಸನ್ನು ಶಿಸ್ತುಬದ್ಧಗೊಳಿಸಲು ಸಾಧ್ಯವಾದರೆ, ನಿಧಾನವಾಗಿ ಮನಸ್ಸು ನಿನ್ನ ಹತೋಟಿಗೆ ಬರುತ್ತದೆ. ಹಾಗೆ ಮಾಡಲು ನೀನು ವಿವೇಕ, ವಿಚಾರ, ವೈರಾಗ್ಯ ಮತ್ತು ನಿಯತ ಆತ್ಮಧ್ಯಾನಗಳೆಂಬ ಸಾಧನೆಗಳನ್ನು ಕೈಗೊಳ್ಳಬೇಕು. ಹಾಗೆ ಮಾಡಿದರೆ ಮಾತ್ರ ಮಾಯೆಯ ಬಂಧನದಿಂದ ಪಾರಾಗಬಲ್ಲೆ, ಅನಂತ ಚೈತನ್ಯದ ಪರಮ ಆನಂದವನ್ನು ಪಡೆಯಬಲ್ಲೆ.'' ✷

## ಸ್ವಾಭಿಮಾನ

ಅಂಗದನು ಶ್ರೀರಾಮನ ಸಂದೇಶವನ್ನು ಹೊತ್ತು ರಾಜದೂತನಾಗಿ ಲಂಕೆಗೆ ಹೋದ. ಆಗ ಅವನ ವಯಸ್ಸು ಕೇವಲ ಇಪ್ಪತ್ತನಾಲ್ಕು. ಅವನನ್ನು ನೋಡಿ ರಾವಣನಿಗೆ ನಗು ಉಕ್ಕಿಬಂತು. ಅವನು ಹೇಳಿದ, ''ಬಹುಶಃ ರಾಮನ ಸೈನ್ಯದಲ್ಲಿ ಗಡ್ಡ–ಮೀಸೆ ಬಂದವರಾರೂ ಇಲ್ಲವೆಂದು ಕಾಣುತ್ತದೆ. ಒಬ್ಬ ಬಾಲಕನನ್ನು ಸಂಧಾನಕ್ಕೆ ಕಳುಹಿಸಿ ಕೊಟ್ಟಿದ್ದಾನೆ.'' ಅಂಗದನ ಸ್ವಾಭಿಮಾನಕ್ಕೆ ಏಟು ಬಿತ್ತು. ಅವನು ಉತ್ತರ ನೀಡುತ್ತ, ''ರಾವಣನಂತಹ ತಿಳುವಳಿಕೆಯುಳ್ಳವನು ಕೂಡ ವ್ಯಕ್ತಿಯ ಆಕಾರ, ವೇಷ ನೋಡಿ ಅವನ ಯೋಗ್ಯತೆಯನ್ನು ಅಳೆಯುತ್ತಾನೆ ಎಂದು ಗೊತ್ತಿದ್ದಿದ್ದರೆ, ಭಗವಾನ್ ಶ್ರೀರಾಮಚಂದ್ರನು ಖಂಡಿತವಾಗಿಯೂ ನನ್ನ ಬದಲಿಗೆ ಒಂದು ದಢೂತಿ ಕುರಿಯನ್ನು ಕಳುಹಿಸಿ ಕೊಡುತ್ತಿದ್ದ'' ಎಂದ.


ಈ ಮಾತನ್ನು ಕೇಳಿ 'ಈ ಹುಡುಗ ಕೇವಲ ಹುಡುಗನಲ್ಲ'ವೆಂಬುದು ರಾವಣನಿಗೆ ಅರ್ಥವಾಯಿತು. ಇದನ್ನು ಚೆನ್ನಾಗಿ ತಿಳಿದೇ ಅವನನ್ನು ಇಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ ಎಂದು ಅವನು ಅರಿತುಕೊಂಡ.


*(ಹಿಂದಿಮೂಲ: 'ಪ್ರೇರಕ ಪ್ರಸಂಗ')*


# ರಥದಿಂದ ಯಾರು ಇಳಿಯಬೇಕು


ಮೂಲ: **ಮಹಾಭಾರತ** ಕಥೆ: **ಸುಂದರಿ ಸುಂದರಂ** ಚಿತ್ರ: **ಶಂಕರ್**

**1** ಅಷ್ಟಕ, ಪ್ರತರ್ದನ, ವಸುಮನಸ್ಸು ಹಾಗೂ ಶಿಬಿ – ಇವರು ನಾಲ್ಕುಜನ ಯಯಾತಿ ರಾಜನ ಮಕ್ಕಳು. ತಮ್ಮ ಸತ್ಕರ್ಮಗಳಿಂದಲೂ, ಉತ್ತಮ ರಾಜ್ಯಭಾರದಿಂದಲೂ ಅವರು ದಿವ್ಯವಾದ ಒಂದು ರಥವನ್ನು ಉಡುಗೊರೆಯಾಗಿ ಪಡೆದರು. ಒಂದು ಸಲ ಅವರು ರಥವನ್ನು ಏರುವ ವೇಳೆಗೆ ದೇವರ್ಷಿ ನಾರದರು ಅಲ್ಲಿಗೆ ಬಂದರು.




4
ದನಗಳನ್ನೆಲ್ಲ ತಾನೇ ಕೊಟ್ಟಿದ್ದಾಗಿ ಅಷ್ಟಕ ಆತ್ಮಸ್ತುತಿ ಮಾಡಿಕೊಂಡ. ದಾನ ಕೊಟ್ಟ ಮೇಲೆ ತನ್ನನ್ನು ತಾನು ಹೊಗಳಿಕೊಂಡವನು ಮೊದಲು ರಥದಿಂದ ಇಳಿಯಬೇಕು.
ಗುರುದೇವ, ಒಂದು ವೇಳೆ ರಥದಲ್ಲಿ ಮೂವರು ಮಾತ್ರ ಇರಬಹುದು ಎಂದಾದರೆ, ಉಳಿದ ಮೂವರಲ್ಲಿ ಯಾರು ಇಳಿಯಬೇಕು?
ಪ್ರತರ್ದನನೇ ಇಳಿಯಬೇಕು. ಒಂದು ಸಲ ನಾವಿಬ್ಬರೂ ರಥದಲ್ಲಿ ಹೋಗುತ್ತಿದ್ದೆವು. ಆಗ ಇಬ್ಬರು ಬ್ರಾಹ್ಮಣರು ಬಂದು, ಕುದುರೆಗಳನ್ನು ಯಾಗವೊಂದಕ್ಕೆ ಭಿಕ್ಷೆಯಾಗಿ ಕೇಳಿದರು.
5
ಪ್ರತರ್ದನ, ನಿನ್ನ ಕುದುರೆಯನ್ನು ಭಿಕ್ಷೆಯಾಗಿ ನಮಗೆ ನೀಡು.
ಓ ಬ್ರಾಹಣರೇ! ದಯವಿಟ್ಟು ನನ್ನ ಅರಮನೆಗೆ ಬನ್ನಿ. ಅಲ್ಲಿ ನಿಮಗೆ ಎಷ್ಟು ಕುದುರೆಗಳು ಬೇಕೋ ಕೊಡುತ್ತೇನೆ.
ಇಲ್ಲ, ನಮಗೆ ಈಗಲೇ ಬೇಕಾಗಿದೆ.
6
ಪ್ರತರ್ದನ, ನನಗೂ ಈಗಲೇ ಕುದುರೆ ಬೇಕಾಗಿದೆ.
ಇಬ್ಬರು ಬ್ರಾಹ್ಮಣರೂ ಒಂದೊಂದು ಕುದುರೆಗಳನ್ನು ತೆಗೆದುಕೊಂಡು ಹೋದರು.
7
ನೋಡಿ, ದೇವರ್ಷಿ ನಾರದರೆ! ಆ ಬ್ರಾಹ್ಮಣರಿಗೆ ತಾಳ್ಮೆಯಿಲ್ಲ. ದಾನ ಕೇಳುವುದಕ್ಕೂ ಸಮಯವಿದೆ ಎಂಬುದು ಅವರಿಗೆ ಗೊತ್ತಿಲ್ಲ. ಅವರೆಂಥಾ ಮನುಷ್ಯರೋ!


8
ದಾನ ನೀಡಿದ ಮೇಲೆ ಪ್ರತರ್ದನನಿಗೆ ತುಂಬ ಅಸಮಾಧಾನವಾಯಿತು. ಹಾಗಾಗಿ ರಥದಲ್ಲಿ ಮೂರೇ ಜನರು ಇರಬೇಕಾದ ಸಂದರ್ಭದಲ್ಲಿ ಅವನೇ ಇಳಿಯಬೇಕು.
ಋಷಿಗಳೇ! ರಥದಲ್ಲಿ ಇಬ್ಬರೇ ಇರಬೇಕಾಗಿ ಬಂದರೆ?
ಆಗ ವಸುಮನಸ್ಸು ಇಳಿಯಬೇಕು. ಏಕೆಂದರೆ, ಅವನು ನನ್ನನ್ನು ಕಂಡಾಗಲೆಲ್ಲ 'ಈ ರಥ ನಿಮ್ಮದೇ' ಎನ್ನುತ್ತಾನೆ. ಆದರೆ ನನಗೆ ಆಗತ್ಯವಿದ್ದಾಗ ಮಾತ್ರ ನನಗೆ ಕೊಡುತ್ತಿಲ್ಲ.
9
ನಾರದರೆ, ಒಂದು ವೇಳೆ ಒಬ್ಬ ವ್ಯಕ್ತಿ ಮಾತ್ರ ರಥದಲ್ಲಿ ಇರಬೇಕಾಗಿ ಬಂದರೆ ...
ಆಗ ನಾನು ಇಳಿದು ಹೋಗಬೇಕು. ಹೌದು, ನಿನ್ನ ತಮ್ಮ ಶಿಬಿ ನನಗಿಂತಲೂ ಶ್ರೇಷ್ಠನಾದವನು. ಈ ಘಟನೆಯನ್ನು ಕೇಳು. ಒಂದು ಸಲ ಒಬ್ಬ ಬ್ರಾಹ್ಮಣ ಅವನ ಬಳಿಗೆ ಹೋದ.
10
ಸಾಧುಗಳೆ, ಇಂದು ನಮ್ಮ ಮನೆಯಲ್ಲಿ ಭೋಜನ ಸ್ವೀಕರಿಸಿ.
ನಿನ್ನ ಮನೆಯಲ್ಲಿ ನಾನು ಊಟಮಾಡಬೇಕಾದರೆ, ನೀನು ನಿನ್ನ ಮಗ ಬೃಹತ್ಗರ್ಭನನ್ನು ಅಡುಗೆ ಮಾಡಿ ನನಗೆ ಬಡಿಸಬೇಕು.
ಆಗಲಿ, ನಿನ್ನ ಇಚ್ಛೆಯಂತೆ ಇಂದು ರಾತ್ರಿ ಅಡುಗೆ ಮಾಡಿ ಬಡಿಸುತ್ತೇನೆ.
11
ಬ್ರಾಹ್ಮಣ ಹೇಳಿದಂತೆಯೆ ಅಡುಗೆ ಮಾಡಿ ತಂದಿದ್ದೇನೆ. ಅವನೆಲ್ಲಿಗೆ ಹೋದ?
ಆ ಬ್ರಾಹ್ಮಣ ತನ್ನ ಅರಮನೆ ಹಾಗೂ ಬೊಕ್ಕಸಕ್ಕೆ ಬೆಂಕಿಯಿಡುತ್ತಿದ್ದ. ಆಗ ರಾಜಭಟರು ಅವನನ್ನು ಅಟ್ಟಿಸಿಕೊಂಡು ಬರುತ್ತಿದ್ದರು.